**ಮೂರನೆ ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ. ನ್ಯಾಯಾಲಯ ಕನಕಪುರ**

**ಸಿ.ಸಿ.ನಂಃ 1917/2022**

ಪಿರ್ಯಾದಿ : ಶ್ರೀ ಪುರುಷೋತ್ತಮ

– ವಿರುದ್ಧ –

ಆರೋಪಿ : ಶ್ರೀ ಶಿವಮಾದು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ**

ಪ್ರಶ್ನೆ–1: ಈ ಪ್ರಕರಣದಲ್ಲಿಯ ಸಾಕ್ಷಿ ಹೇಳಿರುವ ಸಾಕ್ಷ್ಯವನ್ನು ನೀವು ತಿಳಿದುಕೊಂಡಿದ್ದೀರಾ?

ಉತ್ತರ :

ಪ್ರಶ್ನೆ–2: ಫ್ರಾಸಾ–1ಶ್ರೀ ಪುರುಷೋತ್ತಮ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯವುದೇನೆಂದರೆ, ಆರೋಪಿಯಾದ ನೀವು ಫ್ರಾಸಾ–1 ರವರಿಗೆ ಸುಮಾರು 5 ವರ್ಷಗಳಿಂದ ಪರಿಚಯವಿದ್ದು ನಿಮ್ಮ ಹಣಕಾಸಿನ ಅವಶ್ಯಕತೆಗಾಗಿ ಫ್ರಾಸಾ.1 ರವರನ್ನು ದಿನಾಂಕಃ10.06.2020 ರಂದು ಭೇಟಿಯಾಗಿ ರೂ. 8,00,000/– ಗಳ ಹಣಕಾಸಿನ ಸಹಾಯವನ್ನು ಕೋರಿದ್ದು ಮತ್ತು ಆ ಪ್ರಕಾರ ದಿನಾಂಕಃ 10.06.2020 ರಂದು ರೂ.8,00,000/– ಗಳನ್ನು ಪಡೆದುಕೊಂಡು, ಸದರಿ ಹಣದ ಪಾವತಿಗಾಗಿ ಕಾರ್ಪೊರೇಷನ್ ಬ್ಯಾಂಕ್, ಕನಕಪುರ ಶಾಖೆಯ ಚೆಕ್ ನಂ.154386 ನೇದ್ದನ್ನು ರೂ.8,00,000/–ಗಳಿಗೆ ದಿನಾಂಕಃ 18.01.2021 ಎಂದು ಮುಂನಗಡವಾಗಿ ನಮೂದಿಸಿ ಫ್ರಾಸಾ.1 ರವರಿಗೆ ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿಯುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ–3: ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ.1 ಚೆಕ್ಕನ್ನು ಫಿರ್ಯಾದಿಯು ತನ್ನ ಖಾತೆ ಹೊಂದಿರುವ ಐಡಿಬಿಐ ಬ್ಯಾಂಕ್ ಕನಕಪುರ ಶಾಖೆ ಇವರಿಗೆ ನಗದೀಕರಣಕ್ಕಾಗಿ ಸಲ್ಲಿಸಿದ್ದು, ಸದರಿ ಚೆಕ್ಕು ದಿನಾಂಕಃ 19.01.2021 ರಂದು ನಗದೀಕರಣವಾಗದೇ (**Funds Insufficient**) ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡಿದ್ದು, ಈ ಬಗ್ಗೆ ನಿಮಗೆ ವಕೀಲರ ಮುಖಾಂತರ ದಿನಾಂಕಃ 04.02.2021 ರಂದು ನೋಟಿಸನ್ನು ಕಳಿಸಿದ್ದು, ಸದರಿ ನೋಟಿಸ್ ನ್ನು ನೀವು ದಿನಾಂಕಃ 05.02.2021 ತೆಗೆದುಕೊಂಡು ಹಣವನ್ನು ವಾಪಸ್ಸು ಮಾಡದೇ, ಪಿರ್ಯಾದಿಗೆ ಮೋಸ ಮಾಡುವ

ಉದ್ದೇಶದಿಂದ ಸದರಿ ಚೆಕ್ಕನ್ನು ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿಯುತ್ತಾರೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ–4: ನಿಮಗೆ ಏನಾದರೂ ಹೇಳುವುದು ಇದೆಯಾ?

ಉತ್ತರ :

ಪ್ರಶ್ನೆ–5: ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುತ್ತೀರಾ?

ಉತ್ತರ :

(ಮೇಲೆ ಹೇಳಿದ ಹೇಳಿಕೆಗಳನ್ನು ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಅವರಿಗೆ ಓದಿ ಹೇಳಲಾಯಿತು ಮತ್ತು ಆರೋಪಿ ಹೇಳಿದ ಉತ್ತರಗಳನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು).

Sd/–

ಸ್ಥಳಃ ಕನಕಪುರ
ದಿನಾಂಕಃ 21.11.2025

(ರವಿಪ್ರಕಾಶ್ ಟಿ .ಆವಿನ್)
ಮೂರನೇ ಅಪರ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ. ಕನಕಪುರ.

ಆರೋಪಿ ಸಹಿ: